‘ಅರುಂಧತಿ...’

ಅರುಂಧತಿ ‘ನೀವು ಭಾರತಕ್ಕೆ ಕರೆದುಕೊಂಡು ಹೋಗದೆ ಇದ್ದರೆ ನಾನು ಉಪವಾಸ ಸತ್ಯಾಗ್ರಹ ಮಾಡುತ್ತೇನೆ’ ಮನೋಹರ ‘ಅರು... ಅರುಂಧತಿ’

‘ಕಾವ್ಯಾಳಿಗೂ ಸಹ ಭಾರತಕ್ಕೆ ಹೋಗಬೇಕು ಅನ್ನೋ ಹಂಬಲ ಜಾಸ್ತಿಯಾಗಿದೆ’

ಅದು ಮನೋಹರನಿಗೂ ಸಹ ಗೊತ್ತಿತ್ತು. ಕಾವ್ಯ ಅವನನ್ನು ಸದಾ ಪೀಡಿಸುತ್ತಿದ್ದಳು.

‘ಆಯ್ತು. ಭಾರತಕ್ಕೆ ಹೋಗೋಣ’

ಸಂತೋಷ, ಉದ್ವೇಗದಿಂದ ಗಂಡನ ಮುಖದ ತುಂಬಾ ಚುಂಬಿಸಿದಳು. ಕೆಲವು ದಿನಗಳ ನಂತರ ಮನೋಹರ ಸಂಸಾರ ಸಮೇತ ಭಾರತಕ್ಕೆ ಬಂದ. ಕಾವ್ಯಳಿಗೆ ತುಂಬಾ ಸಂತೋಷವಾಗಿತ್ತು. ಯಾಕೆ ಅಂದರೆ ಅವಳು ತಾಯಿನಾಡಿಗೆ ಬಂದಿದ್ದಳು.

ಮತ್ತೊಂದು ಕಾರಣ ಅವನು?

ಪ್ರಿಯತಮ ಸುರೇಂದ್ರ! ಅವಳು ತುಂಬಾ ಪ್ರೀತಿಸುತ್ತಿದ್ದಳು ಸುರೇಂದ್ರ ಭಾರತದಲ್ಲಿ ಇದ್ದ. ಅವನನ್ನು ನೋಡಬಹುದಲ್ಲ. ಅರುಂಧತಿ ‘ರೀ... ರೀ... ನಾವು... ನಾವು ಒಂದು ಸಲ ಸೋಲಿಗಪುರಕ್ಕೆ ಹೋಗಿಬರೋಣ’

ಸೋಲಿಗಪುರ ಎಂಬ ಹೆಸರನ್ನು ಕೇಳಿದ ಕೂಡಲೇ ಬೆನ್ನಿನ ನರ ಕಂಪಿಸಿತು. ಮುಖ ಕಪ್ಪಡರಿತು. ಕಣ್ಣುಗಳು ಸಂಕುಚಿತಗೊಂಡವು. ಸೋಲಿಗಪುರ... ಇವನು ಸುಮಾರು ಇಪ್ಪತ್ತು ವರ್ಷಗಳ ಕಾಲ ಮರೆತಿದ್ದ.

ಸ್ಮಶಾನ.. ಮಾಟ... ಮಾಂತ್ರಿಕ ರುದ್ರನಾಗ... ಸತ್ತಿರುವ ಅವನ ಹೆಂಡತಿಮಕ್ಕಳು.

ಅವರ ಸಾವಿಗೆ ತಾನು ಕಾರಣ. ಮಾಂತ್ರಿಕತೆ ಎನ್ನುವುದು ಸುಳ್ಳು. ದುಡ್ಡನ್ನು ಸಂಪಾದಿಸಲು ರುದ್ರನಾಗ ಜನರನ್ನು ಭಯದ ಭ್ರಮೆಯಿಂದ ಮೋಸಗೊಳಿಸುತ್ತಿದ್ದಾನೆ ಎಂದು ಅಂದುಕೊಂಡಿದ್ದ. ಮಾಂತ್ರಿಕತೆಯನ್ನು ಪರೀಕ್ಷಿಸಲು ಅಂದು ತಾನು ಮಾಡಿದ್ದಾದರೂ ಏನು? ರುದ್ರನಾಗನ ಹೆಂಡತಿ ಮಕ್ಕಳ ಉಗುರು... ತಲೆಯ ಕೂದಲು ಮತ್ತು ಹೆಜ್ಜೆ ಮಣ್ಣನ್ನು ಸಂಗ್ರಹಿಸಿ ರುದ್ರನಾಗನಿಗೆ ಕೊಟ್ಟಿದ್ದ. ಸುಳ್ಳು ಕತೆಯೊಂದನ್ನು ಹೇಳಿದ್ದ. ರುದ್ರನಾಗ ಅವನನ್ನು ನಂಬಿದ್ದ. ತಂಗಿಯ ಗಂಡನಿಗೆ ಸಹಾಯ ಮಾಡುತ್ತೇನೆ ಎಂದು ಹೇಳಿ ಅವನು ದೊಡ್ಡ ಮಾಟ ಮಾಡಿದ್ದ. ಅದರ ಪರಿಣಾಮ ಸಾವು.

ರುದ್ರನಾಗನ ಹೆಂಡತಿ ಮಕ್ಕಳ ಸಾವು! ರುದ್ರನಾಗ ಮುಂಗೋಪಿ... ಅವನೊಬ್ಬ ಮಾಂತ್ರಿಕ... ಅವನು ಖಂಡಿತಾ ಸುಮ್ಮನಿರಲಾರ. ಈ ಸತ್ಯ ಅರುಂಧತಿಗೆ ಗೊತ್ತಿಲ್ಲ. ತನ್ನ ಅತ್ತಿಗೆ ಮತ್ತು ಮಕ್ಕಳು ಸತ್ತಿರುವ ಸಂಗತಿ ಅವಳಿಗೆ ತಿಳಿದಿಲ್ಲ. ಇಲ್ಲ... ಇಲ್ಲ... ತಿಳಿಯಕೂಡದು. ತಿಳಿದರೆ ಅವಳಿಗೆ ನನ್ನ ಬಗ್ಗೆ ತಿರಸ್ಕಾರ ಉಂಟಾಗುತ್ತದೆ.

ಒಂದು ವೇಳೆ ಆಕಸ್ಮಿಕ ರೀತಿಯಲ್ಲಿ ರುದ್ರನಾಗ ನನ್ನನ್ನು ಕಂಡರೆ ಏನಾಗಬಹುದು?

ಇಪ್ಪತ್ತು ವರ್ಷಗಳು ಕಳೆದಿರೋದ್ರಿಂದ ಅವನಿಗೂ ಸಹ ವಯಸ್ಸಾಗಿರೋದ್ರಿಂದ ಮೊದಲಿನ ಕೋಪ ಮತ್ತು ಸೇಡಿನ ತೀವ್ರತೆ ಇರಲಾರದು. ಮನೋಹರ ಸಾಮಾನ್ಯವಾಗಿ ಸಿಗರೇಟು ಸೇದುತ್ತಿರಲಿಲ್ಲ. ಈಗ ಹತ್ತಾರು ತುಂಡುಗಳು ನೆಲದ ತುಂಬಾ ಹರಡಿಕೊಂಡಿವೆ. ಅವನು ಚಿಂತಿಸುತ್ತಿದ್ದಾನೆ. ಭಾರತಕ್ಕೆ ಬಂದು ಮೂರು ದಿನಗಳ ನಂತರ ಅರುಂಧತಿ ಕೊರೆತ ಪ್ರಾರಂಭಿಸಿದಳು. ಸೋಲಿಗಪುರಕ್ಕೆ ಹೋಗಿ ಅಣ್ಣ ಅತ್ತಿಗೆಯನ್ನು ನೋಡಿಕೊಂಡು ಬರೋಣ ಅಂತ.

ಇದಕ್ಕೆ ಮಗಳ ಬೆಂಬಲ! ಕಾವ್ಯಳಿಗೆ ಭಾರತದ ಸಂಸ್ಕೃತಿ, ಸಂಬಂಧ ಎಂದರೆ ಮೊದಲಿನಿಂದಲೂ ಸಹ ತುಂಬಾ ಇಷ್ಟ. ಅವಳು ಹುಟ್ಟಿ ಬೆಳೆದದ್ದು ಅಮೇರಿಕದಲ್ಲೇ ಆಗಿದ್ದರೂ ಸಹ ಅವಳು ಕನ್ನಡ ಕಲಿತಿದ್ದಳು. ತಾಯಿಯಿಂದ ಈ ದೇಶದ ಬಗ್ಗೆ ತಿಳಿದುಕೊಂಡಿದ್ದಳು. ತನ್ನ ತಾಯಿಯ ತವರು ಮನೆ ಒಂದು ಹಳ್ಳಿಯಲ್ಲಿ ಇದೆ. ಸೋದರಮಾವ, ಅತ್ತೆ ಇದ್ದಾರೆ. ಅವರನ್ನೆಲ್ಲಾ ನೋಡುವ ಹಂಬಲ ಇವಳಿಗೆ. ಅದಕ್ಕೆ ತನ್ನ ತಾಯಿಯ ಜೊತೆ ಸೇರಿಕೊಂಡು ಇವಳೂ ಸಹ ಒತ್ತಾಯ ಮಾಡಲಾರಂಭಿಸಿದಳು. ನಿರಾಕರಿಸಲು ಕಾರಣವೇ ಇಲ್ಲ.

‘ಇಂಡಿಯಾಕ್ಕೆ ಈಗ ತಾನೇ ಬಂದಿರೋದ್ರಿಂದ ನನಗೆ ಕೆಲವು ಬಿಜಿನೆಸ್ ಪ್ರಾಬ್ಲಂ ಇವೆ. ಮುಂದಿನ ವಾರ ಕರೆದುಕೊಂಡು ಹೋಗುತ್ತೇನೆ’ ಎನ್ನುತ್ತಾನೆ ಮನೋಹರ.

‘ನಿಜವಾಗಿಯೂ ಕರೆದುಕೊಂಡು ಹೋಗುತ್ತೀರಾ’ ಎಂದು ಅರುಂಧತಿ ಕೇಳಿದಳು.

ಮನೋಹರ ತಲೆಯಾಡಿಸಿದ.

‘ಪ್ರಾಮಿಸ್...’ ಎಂದು ಕೈಚಾಚಿದಳು. ಅವಳ ಕೈ ಅದುಮಿದ.

‘ಥ್ಯಾಂಕ್ಯೂ ಡ್ಯಾಡಿ’ ಎಂದು ಸಂತೋಷ ಮತ್ತು ಉತ್ಸಾಹದಿಂದ ಹೇಳಿದಳು ಕಾವ್ಯ.

ಕಾವ್ಯ ರೂಪದಲ್ಲಿ ತಂದೆಯಂತೆ. ಮಾಸಲು ಬಣ್ಣ, ಪೀಚು ದೇಹ, ಕಾವ್ಯ ಅಂದುಕೊಳ್ಳುತ್ತಿದ್ದಳು. ನಾನು ಅಮ್ಮನಂತೆ ಇದ್ದಿದ್ದರೆ ಮಿಸ್ ಇಂಡಿಯಾ ಆಗಬಹುದಿತ್ತು ಅಂತ. ಮನೋಹರ ಏಕಾಂತದಲ್ಲಿ ಚಿಂತಿಸುತ್ತಿದ್ದ. ಇನ್ನೂ ಒಂದು ವಾರ ಕಾಲಾವಕಾಶ ಇದೆ. ಒಂದೇ ಸಲ ಹೆಂಡತಿಮಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಬಾರದು. ಮೊದಲು ನಾನು ಅಲ್ಲಿಗೆ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ತಿಳಿಯಬೇಕು.

ಮನೋಹರ ಹೆಂಡತಿ ಮತ್ತು ಮಗಳಿಗೆ ತಿಳಿಸಿದಂತೆ ಸೋಲಿಗಪುರಕ್ಕೆ ಹೋಗಲು ನಿರ್ಧರಿಸಿದ. ಅಷ್ಟಬಂಧನದ ದ್ವಾರಗಳು ಅವನಿಗಾಗಿ ತೆರೆದುಕೊಂಡಿದ್ದವು. ಒಂದು ಸಲ ಈ ಬಂಧನಕ್ಕೆ ಒಳಗಾದರೆ ಜೀವಂತವಾಗಿ ಹಿಂತಿರುಗಲು ಸಾಧ್ಯವಿಲ್ಲ. ರುದ್ರನಾಗ ಎಂಬ ಸೇಡಿನ ಸರ್ಪ ಹೆಡೆಯನ್ನು ಅರಳಿಸಿ ಅಪ್ಪಳಿಸಲು ಕಾಯುತ್ತಿದೆ!

ಬೆಳಗಿನ ಹತ್ತು ಗಂಟೆಯ ಸಮಯ. ತಿಂಡಿ ಅಡುಗೆಯನ್ನು ಮುಗಿಸಿದ ನಂತರ ಮನೆಯ ದೂಳನ್ನು ಗುಡಿಸಲು ಮಲ್ಲಿಗೆ ಸಿದ್ಧಳಾದಳು. ಒಂದು ಚೂರು ಕಸ, ಧೂಳು ಇದ್ದರೂ ಸಹ ರುದ್ರನಾಗ ಕೂಗಾಡಿ ಬಿಡುತ್ತಿದ್ದ. ಈಗ ರುದ್ರನಾಗ ಮಲಗುತ್ತಿದ್ದ ರೂಮನ್ನು ಗುಡಿಸುತ್ತಿದ್ದಾಳೆ. ಒಂದೊಂದೇ ವಸ್ತುವನ್ನು ತೆಗೆದು ಒರೆಸಿ, ಶುಚಿ ಮಾಡುತ್ತಿದ್ದಾಳೆ.

ಮಂಚದ ಅಡಿ ಒಂದು ಹಳೆಯ ಕಾಲದ ದೊಡ್ಡ ಟ್ರಂಕ್ ಇತ್ತು. ಕಂದುಬಣ್ಣದ ಟ್ರಂಕ್‌ನ ತುಂಬಾ ಧೂಳು ತುಂಬಿತ್ತು. ಅದನ್ನು ಎಳೆದಳು. ಯಾವಾಗಲೂ ಸಹ ಬೀಗ ಹಾಕಿರುತ್ತಿದ್ದ ಟ್ರಂಕ್‌ನಲ್ಲಿ ಏನಿದೆ ಅಂತ ನೋಡಲು ಆಗಿರಲಿಲ್ಲ. ಈಗ ಬೀಗ ಹಾಕಿರಲಿಲ್ಲ. ಅದನ್ನು ತೆರೆದು ನೋಡಿದಳು. ಅದರಲ್ಲಿ ಅರುಂಧತಿಯ ರೇಷ್ಮೆ ಸೀರೆಗಳು ಮತ್ತು ಚಿನ್ನದ ಆಭರಣಗಳಿದ್ದವು. ಎಲ್ಲವನ್ನೂ ತಡಕಾಡಿ ನೋಡುತ್ತಿರುವಾಗ ಕಂಡು ಬಂದಿತು ಫೋಟೊ! ಅದನ್ನು ಎತ್ತಿಕೊಂಡು ನೋಡಿದಳು. ಏನೋ ಅನುಮಾನ ಬರುತ್ತಿದೆ. ಗಂಡಹೆಂಡತಿಯ ಫೋಟೊ, ಹೆಣ್ಣಿನ ಮುಖವನ್ನು ಎಲ್ಲೋ ನೋಡಿದ ನೆನಪು ಅವಳಿಗೆ. ಆಗ ಹೊಳೆಯಿತು. ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದ ತನ್ನ ಮುಖ ನೆನಪಾಯಿತು.

ಹೌದು... ಹೌದು... ನನ್ನಂತೆಯೇ ಇದ್ದಾಳೆ. ಇವಳೇ ತನ್ನ ತಾಯಿ ಇರಬಹುದೆ? ಹೆಜ್ಜೆಗಳ ಶಬ್ದ ಕೇಳಿಸಿತು. ಬೆಚ್ಚಿಬಿದ್ದು ಹಿಂತಿರುಗಿದಳು.

ರುದ್ರ... ರುದ್ರನಾಗ... ಭಯದಿಂದ ನಡುಗಿದಳು. ಮುಖ ಬಿಳುಚಿಕೊಂಡಿತು. ಮಂಡಿಗಳು ಅದುರಲಾರಂಭಿಸಿದವು. ಮುಗಿಯಿತು... ನನ್ನ ಕತೆ ಮುಗಿಯಿತು. ನಾನು ಮಾವನ ಟ್ರಂಕ್ ಅನ್ನು ಅವನ ಅಪ್ಪಣೆ ಇಲ್ಲದೆ ತೆಗೆದಿರೋದ್ರಿಂದ ನನ್ನನ್ನು ಉಳಿಸಲಾರ. ದಡಕ್ಕನೆ ಎದ್ದು ನಿಂತು ಹಿಂದೆ ಹಿಂದೆ ಸರಿಯುತ್ತಾ ಭಯದಿಂದ ನೋಡಿದಳು.

ಯಾಕೆ ಅಂತ ಗೊತ್ತಿಲ್ಲ. ರುದ್ರನಾಗ ಕೋಪ ಮಾಡಿಕೊಳ್ಳಲಿಲ್ಲ. ಅವಳ ಹತ್ತಿರ ಬರುತ್ತಾ ‘ಮಲ್ಲಿಗೆ ಆ ಫೋಟೊದಲ್ಲಿರೋದು ಯಾರು ಗೊತ್ತೆ?’

ಮಾವ ಶಾಂತ ರೀತಿಯಿಂದ ಕೇಳಿದ್ದರಿಂದ ಹೊಡೆತ ತಪ್ಪಿತು ಎಂದುಕೊಂಡು ‘ಇಲ್ಲ’ ಎಂದಳು.

‘ನಿನ್ನ ತಂದೆತಾಯಿ’ ಉತ್ಸಾಹ ತೋರಿಸುತ್ತಿಲ್ಲ.

‘ನಿನಗೆ ಸಂತೋಷ ಆಗುತ್ತಿಲ್ಲವೆ?’

ಮಲ್ಲಿಗೆ ‘ಮಗಳನ್ನು ಮರೆತು ಎಲ್ಲೋ ಇರುವ ಅವರನ್ನು ಕಂಡು ಸಂತೋಷ ಆಗಲು ಸಾಧ್ಯವೆ?’

ರುದ್ರನಾಗ ಗಂಭೀರವಾಗಿ ‘ನಿನ್ನ ತಂದೆ ತಾಯಿಯ ಬಗ್ಗೆ ನಿನಗ್ಯಾಕೆ ಹೇಳಲಿಲ್ಲ ಅಂತ ಗೊತ್ತೆ? ಅವರು ಒಳ್ಳೆಯವರಲ್ಲ.’ ನಿರ್ಲಿಪ್ತಳಾಗಿ ‘ಅವರೇನು ಮಾಡಿದ್ರು?’

‘ಮೋಸದಿಂದ ಕೊಲೆ ಮಾಡಿದ್ರು?’

ಮಲ್ಲಿಗೆ ವಿಸ್ಮಯದಿಂದಲೇ ‘ನನ್ನ ತಂದೆತಾಯಿ ಯಾರನ್ನು ಕೊಲೆ ಮಾಡಿದ್ರು?’

ದುಃಖ, ಕೋಪದಿಂದ ಬುಸುಗುಡುತ್ತಾ ‘ನನ್ನ ಹೆಂಡತಿ ಮಕ್ಕಳನ್ನು...’

ಬೆಚ್ಚಿ ಬೀಳುತ್ತಾ ‘ಹಾಂ... ಏನಂದ್ರಿ...’

ನಡೆದಿದ್ದ ಘಟನೆಗೆ ಮತ್ತಷ್ಟು ಸುಳ್ಳುಗಳನ್ನು ಸೇರಿಸಿ ಪರಿಣಾಮ ಬೀರುವಂತೆ ವಿವರಿಸಿದ ರುದ್ರನಾಗ. ಅವಳಿಗೆ ತನ್ನ ತಂದೆತಾಯಿಯ ಬಗ್ಗೆ ಅಸಹ್ಯ, ತಿರಸ್ಕಾರ, ಕೋಪ ಮೂಡಬೇಕು ಎಂಬುದೇ ರುದ್ರನಾಗನ ಆಸೆ.

ರುದ್ರನಾಗನ ಆಸೆ ಈಡೇರಿತ್ತು.

(ಸಶೇಷ)